ಸುಮ್ಮನಿರುವುದೇ ಖುಷಿ
ಸಿಗದಿದ್ದರೂ ಹಾಡು
*
ಹಕ್ಕಿ ಹಾರುತಿದೆ ಎತ್ತರ
ತಲೆಯೆತ್ತಿ ನೋಡಿದರೆ
ಆಕಾಶವೆ ಪಂಜರ
*
ಆಸೆಗಳ ಬಿಸಿಲನು
ಗುಡಿಸಿಹಾಕಿದ ಮೋಡ
ಹಕ್ಕಿ ಹಾರಿಹೋದ
ಸಂಜೆ ಆಗಸ
ಬರೆಯಬೇಕೆನಿಸದ ಕವಿತೆ
*
ಎಲೆಯ ನೆರಳಿನಂಥ
ಪುಟ್ಟ ಒಂಟಿ ಹಕ್ಕಿ
ಮೇಲೆ ದೂರದಲಿ
ನಿಶ್ಶಬ್ದ ಆದರುವ
ರೆಕ್ಕೆ ಬಡಿತ
ತಿಳಿಯಾದ ನೀಲಾಕಾಶ ತನ್ನ
ಎದೆಗಣ್ಣ
ರೆಪ್ಪೆ ಮಿಟುಕಿಸುತ್ತ
ಕರೆವ ಹಾಗೆ ಬಾ ಇತ್ತ ಇತ್ತ..
*
ಆಕಳಿನ ಮೈಮೇಲೆ ಗೋರಂಖ ಹಕ್ಕಿ
ಉಣ್ಣೆಗಳ ಹೆಕ್ಕುವಾಗ
ಕುಕ್ಕಿದರು ಚುಚ್ಚದ ಹಾಗೆ
ಕೊಕ್ಕಿನ ಬೀಸು

ಯಾವ ಪರಿವೆಯಿಲ್ಲದೆ ಮೇಯುತ್ತಿರುವ ಆಕಳು
ಕೊರಳಿನ ಗೆಜ್ಜೆಸರ ನಿನಾದ
ಹಕ್ಕಿ ಮೌನ
*
ದಿಕ್ಕು ದಿಕ್ಕಿನಲಿ ಹಕ್ಕಿ
ಅಶರೀರವಾಣಿ
ಚಕಿತದಲಿ ರೆಕ್ಕೆ ತೆರೆದ ಕಣ್ಣು
ಲೋಕವೆಲ್ಲ ಆಕಾಶ

*
ಕಲರವಗಳು
ದಿಕ್ಸೂಚಿ ಮುಳ್ಳು
ಎಲೆ ಸಾವಿರ ರೆಪ್ಪೆ
ಹಕ್ಕಿ ಮರದ ಕಣ್ಣು
*
ಚೂರಿ ಹಕ್ಕಿ
ನನ್ನೆದೆಯ ಹೊಕ್ಕಿ
ಇರಿದ ದನಿ
ಮಾತು ತೀರಿತು
*
ಓಡುತ್ತಿದ್ದ ಪುಟ್ಟ ಹುಡುಗ
ಹಕ್ಕಿ ಕೂಗುವುದ ಕೇಳಿ ಗಕ್ಕನೆ ನಿಂತ
ದನಿ ಬಂದ ಕಡೆ ಹುಡುಕಿದ

ಏನೂ ಕಾಣಲಿಲ್ಲ
ಮತ್ತೆ ಕೂಗಿತು ಹಕ್ಕಿ
ತಾನೇ ಮರವಾದ
*
ಹುಲ್ಲು ಹಕ್ಕಿ
ಒಂದೊಂದೇ ಹುಲ್ಲುಕಡ್ಡಿ ತಂದು
ಜೋಪಾನವಾಗಿ ಕಟ್ಟಿದ್ದ ಗೂಡು
ಅಂದು ಸಂಜೆ ಮರಳಿದಾಗ
ಇರಲೇ ಇಲ್ಲ...

ಹಕ್ಕಿಯ ಕಣ್ಣೀರನ್ನು
ಯಾರಾದರು ಕಂಡಿದ್ದೀರೇನು?
*
ದೊಡ್ಡ ದೊಡ್ಡ ಇಮಾರತುಗಳ ಮೇಲೆ
ಹಕ್ಕಿಗೂಡಿನ ಬಯಕೆ
ಕಡ್ಡಿ
ಕಸ

